**ಅಸಲು ದಾವಾ ನಂ.204/2022**
**ಸಿಡಬ್ಲ್ಯೂ:01**

**ಮೆ: ಹೆಚ್ಚುವರಿ ಹಿರಿಯ ಸಿವಿಲ್ ವ ಜೆ.ಎಮ್.ಎಫ್.ಸಿ. ನ್ಯಾಯಾಲಯ ಬಸವನ-ಬಾಗೇವಾಡಿ**

ಸಾಕ್ಷಿದಾರರ ಹೆಸರು : ಮಲ್ಲಿಕಾರ್ಜುನ ಹಾವಳಗಿ
ತಂದೆ/ಗಂಡ ಹೆಸರು : ಬಸಪ್ಪ
ವಯಸ್ಸು : 46 ವರ್ಷ
ಉದ್ಯೋಗ : ಪಿ.ಡಿ.ಓ
ವಾಸಸ್ಥಳ : ವಂದಾಲ

**<u>ಸಾಕ್ಷಿಯನ್ನು ಇಂದು ದಿನಾಂಕ: 04-08-2025. ರಂದು ಕರೆಯಿಸಿ ಪ್ರಮಾಣೀಕರಿಸಲಾಯಿತು.</u>**
**<u>ಮುಖ್ಯವಿಚಾರಣೆ: ವಾದಿ ಪರ ವಕೀಲರಿಂದ</u>**

2019 ರಿಂದ ಇಲ್ಲಿಯವರೆಗೆ ಗ್ರಾಮ ಪಂಚಾಯತಿ ಕಾರ್ಯಲಯ ವಂದಾಲದಲ್ಲಿ ಪಿ.ಡಿ.ಓ ಅಂತಾ ಕರ್ತವ್ಯನಿರ್ವಹಿಸುತ್ತಿದ್ದೇನೆ.

ನನಗೆ ನ್ಯಾಯಾಲಯದಿಂದ ಸಮನ್ಸ ಬಂದಿರುತ್ತದೆ. ನನಗೆ ಸಮನ್ಸ ನೊಂದಿಗೆ ಮಧ್ಯಂತರ ಅರ್ಜಿ ನಂ.4 ರ ನಕಲು ಪ್ರತಿ ಸಹ ಬಂದಿತ್ತು. ಸದರಿ ಸಮನ್ಸನಲ್ಲಿ ಕೋರಿದಂತೆ ಪ್ಲಾಟ ನಂ.270 ಕ್ಕೆ ಸಂಭಂದಿಸಿದಂತೆ ನಮ್ಮ ಕಛೇರಿಯಲ್ಲಿ ಹಳೇ ದಾಖಲೆ ಇರುವುದಿಲ್ಲ. ಸದರಿ ಆಸ್ತಿಗೆ ಸಂಭಂದಿಸಿದ ಹಳೆಯ ಮೂಲ ಉತಾರಿಯನ್ನು ನ್ಯಾಯಾಲಯಕ್ಕೆ ಮೂಲ ದಾಖಲೆ ತಹಿಸೀಲ್ದಾರ ಕಛೇರಿ ಬ.ಬಾಗೇವಾಡಿಯಲ್ಲಿ ಇರುವುದ್ದರಿಂದ ಅದರ ನಕಲು ನಮ್ಮ ಕಛೇರಿಯಲ್ಲಿ ಲಭ್ಯ ಇರುವುದ್ದರಿಂದ ಮೂಲ ದಾಖಲೆಯನ್ನು ಹಾಜರುಪಡಿಸಿರುವುದಿಲ್ಲ. ಹಳೆ ವಂದಾಲ ಮತ್ತು ಹೊಸ ವಂದಾಲ ಇರುತ್ತವೆ ಎಂದರೆ ಸಾಕ್ಷಿ ಹಳೆ ವಂದಾಲನ್ನು ಕೆಡವಿ ಹೊಸ ವಂದಾಲ ಕಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ವಂದಾಲ ಗ್ರಾಮಕ್ಕೆ ಸಂಭಂದಿಸಿದಂತೆ ವ್ಹಿ.ಪಿ.ಸಿ ನಂ.1 ರಿಂದ 350 ಇರುತ್ತವೆ. ವಂದಾಲ ಗ್ರಾಮ ಪಂಚಾಯತಿ ಹದ್ದಿಯಲ್ಲಿ ಬರುವ ಹುಣಶ್ಯಾಳ ಗ್ರಾಮದ ರಜಿಸ್ಟರ ನಂ.9 ದಾಖಲೆ ಆಗಿದ್ದು ಅದನ್ನು **ನಿಸಿ-1** ಎಂದು ಗುರುತಿಸಲಾಯಿತು. ನಿಸಿ-1 ರಲ್ಲಿ ಕ್ರಮ.ಸಂ.198 ರಲ್ಲಿ ಗುರುಸಿದ್ದಯ್ಯ ಜಂಬಯ ಹಿರೇಮಠ ಅಂತಾ ದಾಖಲೆ ಇರುತ್ತದೆ. ಸದರಿ ಭಾಗವನ್ನು **ನಿಸಿ-1(ಎ)** ಎಂದು ಗುರುತಿಸಲಾಯಿತು.

**<u>ಪಾಟೀ ಸವಾಲಿಗೆ ವಿನಂತಿಸಿಕೊಂಡ ಮೇರೆಗೆ ಅನುಮತಿ ನೀಡಲಾಯಿತು.</u>**

**<u>ಪಾಟೀ ಸವಾಲು: ವಾದಿ ಪರ ವಕೀಲರಿಂದ</u>**

1. ರಜಿಸ್ಟರ ನಂ.9 ರಲ್ಲಿ ದಾಖಲೆ ಇರುವಂತೆ ನಾವು ವ್ಹಿ.ಪಿ.ಸಿ ದಾಖಲೆಯನ್ನು ನೀಡುತ್ತೇವೆ ಎಂದರೆ ಸರಿ. ನಿಸಿ-1 ರಜಿಸ್ಟರನ್ನು ಹೊರತು ಪಡಿಸಿ ವ್ಹಿ.ಪಿ.ಸಿ ನಂ.350 ಆಸ್ತಿಗಳಿಗೆ ಸಂಭಂದಿಸಿದಂತೆ ನಮ್ಮ ಕಛೇರಿಯಲ್ಲಿ ದಾಖಲೆ ಲಭ್ಯ ಇರುವುದಿಲ್ಲ ಎಂದರೆ ಸರಿ. ನಿಸಿ-1(ಎ) ರಲ್ಲಿ ಇರುವ ನಮೂದಿಗೆ ಸಂಭಂದಿಸಿದಂತೆ ದಾಖಲೆ ಕೇಳಿದರೆ ನೀಡಬೇಕಾಗುತ್ತದೆ ಎಂದರೆ

ಸರಿ. ವ್ಹಿ.ಪಿ.ಸಿ ನಂ.1 ರಿಂದ 350ಕ್ಕೆ ಸಂಭಂದಿಸಿದಂತೆ ದಾಖಲೆಗಳು ನಮ್ಮ ಸುಪ್ರದಿಯಲ್ಲಿ ಇರುತ್ತದೆ ಎಂದರೆ ಸರಿ. ಹೊಸ ವ್ಹಿ.ಪಿ.ಸಿ ನಂ.1 ರಿಂದ 350ಗೆ ಸಂಭಂದಿಸಿದ ದಾಖಲೆಗಳು ತಹಿಸೀಲ್ದಾರ ಕಛೇರ ಬ.ಬಾಗೇವಾಡಿಯಲ್ಲಿ ಇದ್ದ ಮೇರೆಗೆ ಅವುಗಳನ್ನು ಮರಳಿಸುವಂತೆ ಕೋರಿ ನಾನು ತಹಿಸೀಲ್ದಾರ ಕಛೇರಿ ಬ.ಬಾಗೇವಾಡಿ ಅವರಿಗೆ ಮನವಿ ಬರೆದಿರುತ್ತೇನೆ ಆದರೆ ಅವರು ದಾಖಲೆ ನೀಡಿರುವುದಿಲ್ಲ. ನಮ್ಮ ಕಛೇರಿಯಿಂದ ದಾಖಲೆಗಳನ್ನು ಕೇಳಿ ಅರ್ಜಿ ಸಲ್ಲಿಸಿದ್ದಾಗ ಮೂಲ ದಾಖಲಾತಿಗಳನ್ನು ಪರಿಶೀಲನೆ ಮಾಡಿ ದಾಖಲೆ ನೀಡುತ್ತೇವೆ ಎಂದರೆ ಸರಿ. ದಾವಾಸ್ತಿಗೆ ಸಂಭಂದಿಸಿದಂತೆ ಮೂಲ ದಾಖಲೆ ತಹಿಸೀಲ್ದಾರ ಕಛೇರಿಯಲ್ಲಿ ಇರುವುದ್ದರಿಂದ ದಾವಾಸ್ತಿ ಕುರಿತು ಈ ಆಸ್ತಿ ಪತ್ರ ನೀಡುವಾಗ ಮೂಲ ದಾಖಲೆಯನ್ನು ಪರಿಶೀಲನೆ ಮಾಡದೇ ಸದರಿ ದಾಖಲೆವನ್ನು ನೀಡಿರುತ್ತೇನೆ ಎಂದರೆ ಸಾಕ್ಷಿ ಹಕ್ಕು ಪತ್ರದ ರಜಿಸ್ಟರವನ್ನು ನೀಡಿದ್ದು ಅದರ ಆದಾರದ ಮೇರೆಗೆ ಹಾಗೂ ವ್ಹಿ.ಪಿ.ಸಿ ನಂ.270ಕ್ಕೆ ಸಂಭಂದಿಸಿದಂತೆ ನಿಸಿ-1 ದಾಖಲೆಯಲ್ಲಿ ನಮೂದು ಇಲ್ಲದೆ ಇರುವ ಕಾರಣ ವಾದಿಯರಿಗೆ ಹಕ್ಕು ಪತ್ರ ನೀಡುವಂತೆ ಸಿಪಾರಸು ಮಾಡಿದ್ದೇ ಅಂತಾ ಸಾಕ್ಷಿ ನುಡಿಯುತ್ತಾರೆ. ನಿಸಿ-13ರಲ್ಲಿ 13 ಜನರಿಗೆ ಹಕ್ಕು ಪತ್ರ ನೀಡಿರುವುದಿಲ್ಲ ಆ ಕಾರಣಕ್ಕಾಗಿ ಸದರಿ 13ಜನರಿಗೆ ಹಕ್ಕು ಪತ್ರ ನೀಡುವಂತೆ ಸಿಪಾರಸು ಮಾಡಿ ತಹಿಸೀಲ್ದಾರ ಕಛೇರಿಗೆ ಮನವಿ ಸಲ್ಲಿಸಿದ್ದೆ. ನಿಸಿ-1(ಎ) ಗೆ ಸಂಭಂದಿಸಿದಂತೆ ಆಸ್ತಿ ಪತ್ರ ನೀಡುವಂತೆ ಯಾರಾದರೂ ಅರ್ಜಿ ಸಲ್ಲಿಸಿದ ಕುರಿತು ನಾನು ಕಛೇರಿಯಲ್ಲಿ ಪರಿಶೀಲನೆ ಮಾಡಿ ನೋಡಬೇಕಾಗುತ್ತದೆ. ಸದರಿ 13ಜನರಿಗೆ ಸಿಪಾರಸನ್ನು ನಾನೇ ಮಾಡಿದ್ದು ಅಂತಾ ಸಾಕ್ಷಿ ತನ್ನ ಬಳಿ ಇರುವ ಸದರಿ ಸಿಪಾರಸು ಮಾಡಿರುವ ದಾಖಲೆಯ ನಕಲನ್ನು ನೀಡಿದ ಮೇರೆಗೆ ಅದನ್ನು **ನಿಸಿ-2** ಎಂದು ಗುರುತಿಸಲಾಯಿತು. ನಿಸಿ-1ರಲ್ಲಿ ಬಿಟ್ಟು ಹೋದ ವ್ಯಕ್ತಿಗಳು ದಾಖಲೆ ಪೂರೈಸುವಂತೆ ಅರ್ಜಿ ಸಲ್ಲಿಸದನ್ನು ಮಾನ್ಯ ನ್ಯಾಯಾಲಯಕ್ಕೆ ಹಾಜರುಪಡಿಸಲು ನನಗೆ ಯಾವುದೇ ತೊಂದರೆ ಇರುವುದಿಲ್ಲ. ನಿಸಿ-2ರಲ್ಲಿ ಹಿಂತದೆ ವ್ಹಿ.ಪಿ.ಸಿ ನಂಬರ ನಿಸಿ-1ರಲ್ಲಿ ಬಿಟ್ಟು ಹೋಗಿರುತ್ತದೆ ಅಂತಾ ನಮೂದು ಮಾಡಿರುವುದಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದ ಗ್ರಾಮ ಸಭೆಯ ಠರಾವಿನಲ್ಲಿ ಆ ಕುರಿತು ನಮೂದು ಇರುತ್ತದೆ ಎಂದು ನುಡಿಯುತ್ತಾರೆ. ನಿಸಿ-2 ಗ್ರಾಮ ಸಭೆಯ ಠರಾವಿನ ಪ್ರತಿ ಎಂದರೆ ಸಾಕ್ಷಿ ಸದರಿ ಠರಾವನ್ನು ಬೆರಳಚ್ಚು ಮಾಡಲಾಗಿರುತ್ತದೆ ಆದರೆ ಮೂಲ ಪ್ರತಿ ಬೇರೆ ಇರುತ್ತದೆ ಎಂದು ನುಡಿಯುತ್ತಾರೆ. ನಿಸಿ-1ರಲ್ಲಿ ಕ್ರಮ.ಸಂ.198ರಲ್ಲಿ ವಾದಿಯ ಹೆಸರು ನಮೂದು ಇದ್ದರೂ ಸಹ ನಿಸಿ-2ರಂತೆ ವಾದಿಗೆ ಮತ್ತೇ ಆಸ್ತಿ ಹಂಚಿಕೆ ಮಾಡಬೇಕಾಂತ

ದುರುದೇಷದಿಂದ ಸಿಪಾರಸು ಮಾಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಈಗಾಗಲೇ ನಿಸಿ-1 ರಲ್ಲಿ ಕ್ರಮ.ಸಂ.198 ರಲ್ಲಿ ವಾದಿಯ ಹೆಸರು ನಮೂದು ಇದ್ದು ಮರಳಿ ಹಂಚಿಕೆ ಮಾಡುವಂತೆ ಕೋರಿ ಸಿಪಾರಸು ಮಾಡುವ ಪ್ರಶ್ನೆ ಉದ್ಭವಿಸುವುದಿಲ್ಲ ಹಾಗಾಗಿ ಅದರಲ್ಲಿ ನನ್ನ ಯಾವುದೇ ದುರುದೇಷ ಇರುವುದಿಲ್ಲ ಎಂದು ನುಡಿಯುತ್ತಾರೆ. ನಿಸಿ-1 ಹಳೆ ಹುಣಶ್ಯಾಳ ಗ್ರಾಮಕ್ಕೆ ಸಂಭಂದಿಸಿದ ರಜಿಸ್ಟರ ನಂ.9 ಎಂದರೆ ಸರಿ. ವ್ಹಿ.ಪಿ.ಸಿ ನಂ.270 ಹೊಸ ಪ್ಲಾಟಗಳ ಹಂಚಿಕೆ ಮಾಡಿದ ದಾಖಲೆಯಲ್ಲಿ ಬರುವಂತಹ ಆಸ್ತಿ ಎಂದರೆ ಸರಿ. ಹೊಸ ವ್ಹಿ.ಪಿ.ಸಿ ನಂ.1 ರಿಂದ 350 ಲಿಸ್ಟ ಮನೆ ಕಳೆದುಕೊಂಡವರ ಹೊಸ ಲಿಸ್ಟು ಎಂದರೆ ಸರಿ. ನಿಸಿ-1(ಎ) ರಲ್ಲಿ ನಮೂದು ಇರುವ ಹಳೆ ಮನೆ ಅಸ್ತಿತ್ವದಲ್ಲಿ ಇರುತ್ತದೆ. ನಿಸಿ-1(ಎ) ರಲ್ಲಿ ಹಳೆ ಮನೆ ಅಸ್ತಿತ್ವದಲ್ಲಿ ಇದ್ದರೂ ಸಹ ಖೊಟ್ಟಿ ರೀತಿಯಿಂದ ವಾದಿಯ ಮನೆ ಸದರಿ ದಾಖಲೆಯಲ್ಲಿ ಸೇರಿಸಿರುವುದಿಲ್ಲ ಅಂತಾ ಸಿಪಾರಸಿನಲ್ಲಿ ನಮೂದಿಸಿ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ವ್ಹಿ.ಪಿ.ಸಿ.ನಂ.270 ನಿಸಿ-1 ರಲ್ಲಿ ಬಿಟ್ಟುಹೋಗಿದ್ದರಿಂದ ಅವರಿಗೆ ಹಕ್ಕು ಪತ್ರ ಮರು ಹಂಚಿಕೆ ಮಾಡುವಂತೆ ಕೇವಲ ಸಿಪಾರಸು ಮಾಡಿರುತ್ತೇನೆ ಅಂತಾ ನುಡಿಯುತ್ತಾರೆ. ವ್ಹಿ.ಪಿ.ಸಿ ನಂ.270 ಈಗಾಗಲೇ ವಾದಿಗೆ ಹಂಚಿಕೆ ಆದ ಮನೆ ಎಂದರೆ ಸಾಕ್ಷಿ ದಾಖಲೆ ನೀಡಿದರೆ ಪರಿಶೀಲನೆ ಮಾಡಿ ನೋಡುವುದಾಗಿ ನುಡಿಯುತ್ತಾರೆ. ಸಾಕ್ಷಿ ಮುಂದುವರೆದ ಆಸ್ತಿ ಹಂಚಿಕೆ ಮಾಡುವ ಅಧಿಕಾರ ನಮಗೆ ಇಲ್ಲ ಎಂದು ನುಡಿಯುತ್ತಾರೆ. ನಿಸಿ-2 ರಲ್ಲಿ ವ್ಹಿ.ಪಿ.ಸಿ ನಂ.270 ಖಾಲಿ ಇರುತ್ತದೆ ಅಂತಾ ನಮೂದು ಮಾಡಿಲ್ಲ ಎಂದರೆ ಸರಿ. ನಾನು ಸಿಪಾರಸು ಮಾಡಿದಂತೆ ತಹಿಸೀಲ್ದಾರ ಕಾರ್ಯ ನಿರ್ವಾಹಕ ಅಧಿಕಾರ ತಾಲೂಕ ಪಂಚಾಯತಿ ನಿಡಗುಂದಿ ಅವರು ಜಂಟಿಯಾಗಿ ಹಕ್ಕು ಪತ್ರ ನೀಡಿದ್ದರು ಎಂದರೆ ಸರಿ. ಹಕ್ಕು ಪತ್ರ ಬಂದ ನಂತರ ಯಾರ ಹೆಸರಿಗೆ ಹಕ್ಕು ಪತ್ರ ನೀಡಲಾಗಿರುತ್ತದೊ ಅವರ ಹೆಸರನ್ನು ನಮ್ಮ ಕಛೇರಿ ದಾಖಲೆಗಳಲ್ಲಿ ನಮೂದು ಮಾಡಿಕೊಳ್ಳುತ್ತೇವೆ ಎಂದರೆ ಸರಿ. ವ್ಹಿ.ಪಿ.ಸಿ ನಂ.270 ಖಾಲಿ ಇರುತ್ತದೆ ಅಂತಾ ನಿಮ್ಮ ಕಛೇರಿಯಲ್ಲಿ ದಾಖಲೆ ಇರುತ್ತದೆ ಎಂದರೆ ಸಾಕ್ಷಿ ತಹಿಸೀಲ್ದಾರ ಕಛೇರಿಯಿಂದ ಹಕ್ಕು ಪತ್ರ ಬಂದ ಮೇರೆಗೆ ನಮ್ಮ ಕಛೇರಿಯಲ್ಲಿ ದಾಖಲೆ ಇರುತ್ತದೆ ಅಂತಾ ನುಡಿಯುತ್ತಾರೆ. ವಾದಿ ಹೆಸರಿಗೆ ವ್ಹಿ.ಪಿ.ಸಿ ನಂ.270 ಇದ್ದರೂ ಸಹ ಖೊಟ್ಟಿ ರೀತಿಯಿಂದ ಈ ಆಸ್ತಿ ಪತ್ರವನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆಗೆ ನಿಸಿ-1 ರಲ್ಲಿ ಕ್ರ.ಸಂ.241 ಮಾತ್ರ ಇರುತ್ತದೆ ಎಂದು ನುಡಿಯುತ್ತಾರೆ. ವ್ಹಿ.ಪಿ.ಸಿ ನಂ.270 ಕ್ಕೆ ಸಂಭಂದಿಸಿದಂತೆ ಮೂಲ ದಾಖಲೆಯನ್ನು ತೆಗೆದರೆ ಅದು ವಾದಿ

ಹೆಸರಿಗೆ ಖಾತೆ ಇರುತ್ತದೆ ಎಂದರೆ ಸಾಕ್ಷಿ ದಾಖಲೆ ನೀಡಿದರೆ ಪರಿಶೀಲನೆ ಮಾಡಿ ನೋಡುತ್ತೇನೆ ಎಂದು ನುಡಿಯುತ್ತಾರೆ. ವ್ಹಿ.ಪಿ.ಸಿ ನಂ.270 ಕ್ಕೆ ಸಂಭಂದಿಸಿದಂತೆ ಮೂಲ ದಾಖಲೆ ನಮ್ಮ ಕಛೇರಿಯಲ್ಲಿ ಇಲ್ಲದೆ ಇರುವ ಕಾರಣ ಅದರ ಕುರಿತು ದಾಖಲೆ ನೀಡಲು ಬರುವುದಿಲ್ಲ ಮತ್ತು ಆ ಕುರಿತು ಹೇಳಲು ಬರುವುದಿಲ್ಲ ಎಂದರೆ ಸರಿ. ವ್ಹಿ.ಪಿ.ಸಿ ನಂ.270 ಕ್ಕೆ ಸಂಭಂದಿಸಿದಂತೆ ಮೂಲ ದಾಖಲೆ ಇಲ್ಲದೆ ಈ ಆಸ್ತಿ ಪತ್ರ ನೀಡಿರುವುದು ಖೊಟ್ಟಿಯಾಗಿರುತ್ತದೆ ಎಂದರೆ ಸರಿಯಲ್ಲ. ಗುರುಸಿದ್ದಯ್ಯ ಹಿರೇಮಠ ಅವರಿಗೆ ಅನುಕುಲವಾಗಲಿ ಎಂದು ಖೊಟ್ಟಿ ರೀತಿಯಿಂದ ಈ ಆಸ್ತಿ ಪತ್ರವನ್ನು ಸೃಷ್ಟಿಸಿ ನೀಡಿರುತ್ತೇನೆ ಎಂದರೆ ಸರಿಯಲ್ಲ. ವ್ಹಿ.ಪಿ.ಸಿ ನಂ.270 ರ ಮಾಲೀಕಳು ವಾದಿ ಅಂತಾ ಗೊತ್ತಿದ್ದರು ಸಹ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ತಹಿಸೀಲ್ದಾರ ನಿಡಗುಂದಿ ಮತ್ತು ಕಾರ್ಯನಿರ್ವಾಹಕ ಅಧಿಕಾರ ತಾಲೂಕ ಪಂಚಾಯತಿ ನಿಡಗುಂದಿಯವರು ಹಕ್ಕು ಪತ್ರ ನೀಡಿದ ಮೇರೆಗೆ ಆ ಕುರಿತು ಈ ಆಸ್ತಿ ನೀಡಿರುತ್ತೇನೆ ಎಂದು ನುಡಿಯುತ್ತಾರೆ.

<u>**ಪಾಟೀ ಸವಾಲು: 1 ನೇ ಪ್ರತಿವಾದಿ ಪರ ವಕೀಲರಿಂದ**</u>

2. ಗುರುಸಿದ್ದಯ್ಯ ಹಿರೇಮಠರವರಿಗೆ ನಿಸಿ-1 ರಲ್ಲಿ ಕ್ರಮ.ಸಂ.198 ಹಂಚಿಕೆ ಆಗಿದ್ದು ಅವರು ತೆಗೆದುಕೊಳ್ಳದೆ ಇರುವ ಕಾರಣ ಸದರಿ ಆಸ್ತಿಯನ್ನು ನಾವು ಬೇರೆಯವರಿಗೆ ಹಂಚಿಕೆ ಮಾಡಿದ್ದೇವು ಎಂದರೆ ಸಾಕ್ಷಿ ಒಟ್ಟು 13 ಜನರಿಗೆ ನಿಸಿ-1 ರಜಿಸ್ಟರನಲ್ಲಿ ಹೆಸರು ಬಿಟ್ಟು ಹೋಗಿದ್ದ ಕಾರಣ ಸದರಿ 13 ಜನರಿಗೆ ಹಕ್ಕು ಪತ್ರ ನೀಡುವಂತೆ ಸಿಪಾರಸು ಮಾಡಿ ಮನವಿ ಬರೆದಿರುತ್ತೇನೆ ಎಂದು ನುಡಿಯುತ್ತಾರೆ. 2009 ನೇ ಸಾಲಿನಲ್ಲಿ ಬಾರಿ ಮಳೆಯಿಂದಾಗಿ ಹುಣಶ್ಯಾಳ ಪಿ.ಸಿ ಗ್ರಾಮದ ಆಸ್ತಿ ನಂ.198 ಹಾನಿವಳಗಾಗಿದ್ದರಿಂದ ಸದರಿ ಮನೆ ಮಾಲೀಕರಿಗೆ ಮರಳಿ ವ್ಹಿ.ಪಿ.ಸಿ.ನಂ.270 ನ್ನು ಹಂಚಿಕೆ ಮಾಡಲಾಗಿತ್ತು ಎಂದರೆ ಸಾಕ್ಷಿ ಮುಂಚೆ ಏನು ಆಗಿರುತ್ತದೆ ಅಂತಾ ಮಾಹಿತಿ ಇಲ್ಲ ಹಕ್ಕು ಪತ್ರದ ಆದಾರ ಮೇರೆಗೆ ಸಾಕ್ಷಿ ನುಡಿಯುತ್ತಿದ್ದೇನೆ ಎಂದು ನುಡಿಯುತ್ತಾರೆ. ಪ್ರತಿವಾದಿಗೆ ಹಂಚಿಕೆ ಮಾಡಿದ ಮೂಲ ಆಸ್ತಿ ನಂ.198 ರ ದಾಖಲೆ ತಹಿಸೀಲ್ದಾರ ಕಛೇರಿ ಬ.ಬಾಗೇವಾಡಿ ಅವರ ಬಳಿ ಇರುತ್ತದೆ ಎಂದರೆ ಸಾಕ್ಷಿ ಕೃಷಿ ಜಮೀನು ಪಡೆದುಕೊಂಡು ಅದರಲ್ಲಿ ನಿವೇಶನಗಳನ್ನು ಹಂಚಿಕೆ ಮಾಡಿದ್ದರಿಂದ ಕೃಷಿ ಜಮೀನಿಗೆ ಸಂಭಂದಿಸಿದ ದಾಖಲೆಗಳು ತಹಿಸೀಲ್ದಾರ ಕಛೇರಿಯಲ್ಲಿ ಇದ್ದು ಹಕ್ಕು ಪತ್ರ ನಮ್ಮ ಕಛೇರಿಗೆ ಬಂದ ಮೇರೆಗೆ ಹಕ್ಕು ಪತ್ರದ ದಾಖಲೆಗಳು ನಮ್ಮ ಕಛೇರಿಯಲ್ಲಿ ಇರುತ್ತದೆ ಎಂದು

ನುಡಿಯುತ್ತಾರೆ. 1993 ನೇ ಸಾಲಿನಿಂದ ವಂದಾಲ ಗ್ರಾಮ ಪಂಚಾಯತ ಅಸ್ತಿತ್ವದಲ್ಲಿ ಬಂದಿರುತ್ತದೆ. ಬಿರಲದಿನ್ನಿ ಗ್ರಾಮ ಪಂಚಾಯತ ಯಾವಾಗ ಅಸ್ತಿತ್ವದಲ್ಲಿ ಬಂತು ಅಂತಾ ಮಾಹಿತಿ ಇಲ್ಲ. ಕರ್ನಾಟಕ ರಾಜ್ಯದಲ್ಲಿ 1993 ನೇ ಸಾಲಿನಲ್ಲಿ ಪಂಚಾಯತ ರಾಜ ಕಾಯ್ದೆ ಜಾರಿಗೆ ಬಂದಿದ್ದರಿಂದ ಅವಾಗಿನಿಂದ ಗ್ರಾಮ ಪಂಚಾಯತಗಳು ಅಸ್ತಿತ್ವದಲ್ಲಿ ಬಂದವು ಎಂದರೆ ಸರಿ. ಗುರುಸಿದ್ದಯ್ಯ ಹಿರೇಮಠ ಅವರ ಹೆಂಡತಿ ಶಿವಲೀಲಾ ರವರು ವಾಸ ಮಾಡುತ್ತಿದ್ದ ವ್ಹಿ.ಪಿ.ಸಿ. ನಂ.270 ಕ್ಕೆ ವಾದಿ ಮತ್ತು ಅವಳ ಗಂಡ ಚನ್ನಯ್ಯ ಹಿರೇಮಠ ಹರಕತ್ತು ಮಾಡಿದ್ದರಿಂದ ಪ್ರತಿವಾದಿ ನಮಗೆ ಮನವಿ ಸಲ್ಲಿಸಿದ್ದಾಗ ಹಕ್ಕು ಪತ್ರ ಇಲ್ಲದ ಕಾರಣ ದಾಖಲೆ ನೀಡಲು ಬರುವುದಿಲ್ಲ ಅಂತಾ ನಾನು ಪ್ರತಿವಾದಿಗೆ ಹೇಳಿ ಕಳಿಸಿದ್ದೆ ಎಂದು ನುಡಿಯುತ್ತಾರೆ.

3) ಜನವರಿ 2025 ರಲ್ಲಿ ವಾದಿ ದಾವಾಸ್ತಿ ಕುರಿತು ದಾಖಲೆ ಪೂರೈಸುವಂತೆ ಮನವಿ ಸಲ್ಲಿಸಿದನ್ನು ಬಿಟ್ಟು ಅದಕ್ಕಿಂತ ಹಿಂದೆ ವಾದಿ ಆ ರೀತಿ ಅರ್ಜಿ ಸಲ್ಲಿಸಿದ ಕುರಿತು ನಾನು ಪರಿಶೀಲನೆ ಮಾಡಿ ನೋಡಬೇಕಾಗುತ್ತದೆ. ವಂದಾಲ ಗ್ರಾಮ ಪಂಚಾಯತಿ 2019 ನೇ ಸಾಲಿನಲ್ಲಿ ಆ ನಂತರ 2020-21 ರಲ್ಲಿ ಮತ್ತೇ 2022 ರಲ್ಲಿ ಪಡೆದುಕೊಂಡಿರುತ್ತೇನೆ. ನವೆಂಬರ 2024 ರಿಂದ 21-05-2025 ರವರೆಗೆ ಪ್ರಭಾರ ಪಡೆದುಕೊಂಡಿದ್ದೆ. 2020-21 ನೇ ಸಾಲಿನಲ್ಲಿ ವಾದಿ ಗಂಡ ಬಿರಲದಿನ್ನಿ ಗ್ರಾಮ ಪಂಚಾಯತಿಗೆ ಸಂಭಂದಿಸಿದ ಒಂದು ದಾಖಲೆಯನ್ನು ತೆಗೆದುಕೊಂಡು ಬಂದಿದ್ದರು ಆಗ ನಾನು ಪರಿಶೀಲನೆ ಮಾಡಿ ನಮ್ಮ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ 241 ಆಸ್ತಿಗಳು ಮಾತ್ರ ಇರುತ್ತದೆ ಅಂತಾ ಮತ್ತು ಅವುಗಳಿಗೆ ತಹಿಸೀಲ್ದಾರ ಕಛೇರಿಗೆ ಹೋಗುವಂತೆ ತಿಳಿಸಿದ್ದೆ. ಸಾಕ್ಷಿಗೆ ನ್ಯಾಯಾಲಯದ ಕಡತದಲ್ಲಿ ಇರುವ ವ್ಹಿ.ಪಿ.ಸಿ. ನಂ.270 ಕ್ಕೆ ಸಂಭಂದಿಸಿದ ಮನೆಗಳ ಉತಾರಿಯನ್ನು ತೋರಿಸಿ ಸದರಿ ದಾಖಲೆಯನ್ನು ವಾದಿ ಗಂಡ ತೆಗೆದುಕೊಂಡು ಬಂದಿದ್ದರು ಅಂತಾ ಸಾಕ್ಷಿ ನೋಡಿ ನುಡಿದಿರುತ್ತಾರೆ. ಸದರಿ ದಾಖಲೆಯನ್ನು 1988-89 ನೇಸಾಲಿಗೆ ಸೇರಿದ ಮನೆ ಭೂಮಿಯ ಕರ ವಿಧಿಸಿದ ಯ್ಯಾದಿ ಮತ್ತು ಗ್ರಾಮ ಪಂಚಾಯತ ಬಿರಲದಿನ್ನಿ ಗ್ರಾಮ ಹುಣಶ್ಯಾಳ ಪಿ.ಸಿ ಅಂತಾ ನಮೂದು ಇರುತ್ತದೆ ಎಂದರೆ ಸರಿ. ಸದರಿ ದಾಖಲೆಯಲ್ಲಿ ಕಾರ್ಯದರ್ಶಿ ಗ್ರಾಮ ಪಂಚಾಯತ ಬಿರಲದಿನ್ನಿ ದಿ:01-09-2000 ಅಂತಾ ನಮೂದು ಇರುತ್ತದೆ ಎಂದರೆ ಸರಿ. ನಿಸಿ-2 ರಲ್ಲಿ ಈ ಕೆಳಗಿನ ಪತ್ರಕ್ಕೆ ಲಗತ್ತಿಸಿದ ಪಲಾನುಭವಿಗಳನ್ನು ಗುರುತಿಸಿದ್ದು ಅದರಂತೆ ಮಾನ್ಯರ ಗಮನಕ್ಕೆ ತರುತ್ತಾ ಮುಂದಿನ ಕ್ರಮಕ್ಕಾಗಿ ಆದರ ಪೂರಕ ಗೌರವ್ವಗಳೊಂದಿಗೆ ಸಲ್ಲಿಸಲಾಗಿರುತ್ತದೆ ಅಂತಾ ನಮೂದು ಇರುತ್ತದೆ ಎಂದರೆ ಸರಿ.

**<u>ಮರುವಿಚಾರಣೆ ಪಾಟೀ ಸವಾಲು :ವಾದಿ ಪರ ವಕೀಲರಿಂದ</u>**

4) ನಿಸಿ-2 ದಾಖಲೆಯಂತೆ ದಿ:21-09-2021 ರಂದು ಸಿಪಾರಸು ಮಾಡಲಾಗಿರುತ್ತದೆ ಎಂದರೆ ಸರಿ. ಸಾಕ್ಷಿಗೆ ಗ್ರಾಮ ಪಂಚಾಯತ ವಂದಾಲರವರು ನೀಡಿದ ಧೃಡಿಕರಣ ಪ್ರಮಾಣ ಪತ್ರವನ್ನು ತೋರಿಸಿ ಅದನ್ನು ಒಪ್ಪಿಕೊಂಡ ಮೇರೆಗೆ ಅದನ್ನು **ನಿಸಿ-3** ಎಂದು ಗುರುತಿಸಲಾಯಿತು. ನಿಸಿ-3 ರಂತೆ ದಿ:10-10-2022 ರಂದು ಆಸ್ತಿ ನಂ.198 ಗುರುಸಿದ್ದಯ್ಯ ಹಿರೇಮಠ ಅವರ ಹೆಸರು ದಾಖಲೆ ಇರುತ್ತದೆ ಎಂದರೆ ಸರಿ. ದಿ:10-10-2022 ರಂದು ಆಸ್ತಿ ನಂ.198 ಗುರುಸಿದ್ದಯ್ಯ ಹಿರೇಮಠ ಅವರ ಹೆಸರಿಗೆ ಖಾತೆ ಇದ್ದರು ದಿ:21-09-2021 ರಂದು ಅವರ ಹೆಸರಿಗೆ ಆಸ್ತಿ ಇರುವುದಿಲ್ಲ ಅಂತಾ ಖೊಟ್ಟಿ ರೀತಿಯಿಂದ ಸಿಪಾರಸು ಮಾಡಿರುತ್ತೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ ಹೆ ಕೆ ಸರಿ ಅದೆ**

**ಹೆಚ್ಚುವರಿ ಹಿರಿಯ ಸಿವಿಲ್ ವ ಜೆ ಎಮ್ ಎಫ್ ಸಿ ನ್ಯಾಯಾಧೀಶರು,
ಬಸವನ ಬಾಗೇವಾಡಿ.**